# CBSE Class 10 Kannada Answer Key 2022 (May 6)

KEY Answers TERM II (2021-22)
SUBJECT- KANNADA (015)
CLASS 10

## ಮಾದರಿ ಉತ್ತರಗಳು

ವಿಭಾಗ-A

**I ವಾಚನಾ ಮತ್ತು ಗ್ರಹಿಕಾ ಕೌಶಲ್ಯ-04 ಅಂಕಗಳು**

1. ಮನೆಯಲ್ಲಿ ಒಲೆ ಉರಿಸಲು ಮಹಿಳೆಯರು ಒಣಗಿ ಬಿದ್ದ ಕಡ್ಡಿ,ತರಗೆಲೆಗಳ ಪುರಲು ಹೆಕ್ಕಿ ತರುತ್ತಾರೆಯೇ ಹೊರತು ಮರವೊಂದು ಒಣಗಿ ನಿಂತಿದ್ದರೂ ಅದನ್ನು ಉರುಳಿಸಲು ಹೋಗುವುದಿಲ್ಲ.'ಇಂದಲ್ಲ ನಾಳೆ ಅದು ತಾನಾಗೇ ಬೀಳುತ್ತದೆ. ಅಲ್ಲಿಯವರೆಗೆ ಕಾಯೋಣ' ಎನ್ನುವುದು ಮಹಿಳೆಯ ವಿಚಾರ.(1) ಆ ಮರವನ್ನು ಅಂದೇ ಕಡಿದುರುಳಿಸುವುದಕ್ಕೆ ಹಿಂಜರಿಯುವುದಿಲ್ಲ. ನಾಳೆ ಬೀಳುವ ಮರವನ್ನು ಇಂದೇ ಉರುಳಿಸಿ ಸೌದೆ ಮಾಡೋಣ ಎನ್ನುವುದು ಪುರುಷನ ವಿಚಾರ.(1)

2. ಭೂಮಿಯೊಂದಿಗಿನ ಮಹಿಳೆಯ ಒಡನಾಟ, ಕೃಷಿಯಲ್ಲಿ, ಮನೆಯ ತೋಟದಲ್ಲಿ, ಊರ ಪಕ್ಕದ ಗೋಮಾಳದಲ್ಲಿ, ದೇವರ ಕಾಡುಗಳಲ್ಲಿ,(1) ಕಾಡು ಉತ್ಪನ್ನಗಳ ಸಂಗ್ರಹದಲ್ಲಿ, ಪರಿಸರ ಚಳುವಳಿಗಳಲ್ಲಿ ಮತ್ತು ಪರಿಸರಸಂರಕ್ಷಣೆಯ ಯೋಜನೆಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ ಕಾಣಬಹುದು.(1)

**ವಿಭಾಗ-B**

**ಅನ್ವಯಿಕ ವ್ಯಾಕರಣ-04 ಅಂಕಗಳು**

**II** 3. ಗಾದೆಯ ಮಾತನ್ನು ವಿಸ್ತರಿಸಿ ಬರೆಯಿರಿ. 2 ಅಂಕಗಳು
ಹೊರ ಅರ್ಥ-(1),
ಒಳ ಅರ್ಥ-(1)
(ಹೇಳಿಕೆಯನ್ನು ಒಳಗೊಂಡ ಗಾದೆಯ ವಿವರಣೆಯನ್ನು ನೋಡಿ ಅಂಕಗಳನ್ನು ನೀಡುವುದು).

4. ನಿಷೇದಾರ್ಥಕ ಮತ್ತು ಸಂಭಾವನಾರ್ಥಕ ಪದಗಳನ್ನು ಗುರುತಿಸಿ. 2 ಅಂಕಗಳು
ನಿಷೇದಾರ್ಥಕ- ಮಾಡನು (1/2), ಕೇಳನು (1/2)
ಸಂಭಾವನಾರ್ಥಕ- ಕೇಳಿಯಾನು(1/2), ನಡೆದೀತು (1/2)

**III ಬರವಣಿಗೆ ಕೌಶಲ್ಯ- 12 ಅಂಕಗಳು**

5. ಪ್ರಬಂಧ- 4 ಅಂಕಗಳು
ಪೀಠಿಕೆ-(1/2),
ವಿಷಯ ವಿವರಣೆ-(2),
ಉಪಸಂಹಾರ-(1/2),
ಭಾಷಾಶೈಲಿ-(1).

6. ಪತ್ರಲೇಖನ- 4 ಅಂಕಗಳು
ಅಂಚೆ ವಿಭಾಗದ ಅಧಿಕಾರಿಗೆ ಪತ್ರ: 4 ಅಂಕಗಳು
ಇಂದ-(1/2),
ಇವರಿಗೆ (1/2),


collegedunia.com India's largest Student Review Platform

ದಿನಾಂಕ ಮತ್ತು ಸಂಬೋಧನೆ (1/2)
ವಿಷಯ-(1/2),
ಪತ್ರದ ಒಡಲು-(1. ½)
ಮುಕ್ತಾಯ ಮತ್ತು ಸಹಿ-(1/2).

ಗ್ರಂಥಪಾಲಕರ ಹುದ್ದೆಗೆ ಅರ್ಜಿ: 4 ಅಂಕಗಳು
ಇಂದ-(1/2),
ಇವರಿಗೆ-(1/2),
ದಿನಾಂಕ-(1/2),
ವಿಷಯ ಮತ್ತು ಉಲ್ಲೇಖ-(1/2), ಸ್ವ ವಿವರ/ಒಡಲು-(1.1/2),
ಮುಕ್ತಾಯದ ಒಕ್ಕಣೆ-(1/2),

**7. ವರದಿ- 4 ಅಂಕಗಳು**
ಶೀರ್ಷಿಕೆ (1/2,),
ಸ್ಥಳ-(1/2,),
ದಿನಾಂಕ-(1/2,),
ವರದಿಗಾರರ ಸಹಿ-(1/2,)
ಒಡಲು- (2)

ವಿಭಾಗ-C

ಪದ್ಯಗಳ ಅಧ್ಯಯನ: 20 ಅಂಕಗಳು

IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

8. ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು?

ಉತ್ತರ: ದುಷ್ಟಬುದ್ಧಿಯು ಧರ್ಮಾಧಿಕರಣರಿಗೆ ಸಂಪತ್ತೆಲ್ಲವನ್ನು ಧರ್ಮಬುದ್ಧಿಯೇ ತೆಗೆದುಕೊಂಡಿರುವನೆಂದು,
ಸಂಪತ್ತನ್ನು ಹುದುಗಿಡುವಾಗ ಇವರಿಬ್ಬರಲ್ಲದೇ ಬೇರಾರೂ ಇಲ್ಲವೆಂದು ,ಅಲ್ಲಿದ್ದ ವಟವೃಕ್ಷವೇ ಸಾಕ್ಷಿಯೆಂದು
ಹೇಳುತ್ತಾನೆ. ಮರವೊಂದನ್ನು ಸಾಕ್ಷಿಯಾಗಿ ಹೇಳಿದ್ದನ್ನು ಕೇಳಿ ಧರ್ಮಾಧಿಕರಣರು ವಿಸ್ಮಯಗೊಳ್ಳುತ್ತಾರೆ.

9. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?

ಉತ್ತರ: "ಈ ಭೂಮಂಡಲದಲ್ಲಿ ಕೌಸಲ್ಯಾಕುಮಾರನಾದ ರಾಮನೊಬ್ಬನೇ ವೀರನು. ಆತನ ಯಜ್ಞಾಶ್ವವಿದು. ಇದನ್ನು
ನಿಭಾಯಿಸಲು ಸಮರ್ಥರಾದವರು ತಡೆಯಿರಿ" ಎಂದು ಬರೆದಿತ್ತು.

10. ಶಾನುಭೋಗರಿಗೆ ತಲೆ ಸುತ್ತಲು ಕಾರಣವೇನು?

ಉತ್ತರ: ಹುಲಿಯು ಹಿಂದಿನಿಂದ ಮೇಲೆ ಬೀಳುವುದಿಲ್ಲವೆಂದು ಬಲ್ಲ ಶಾನುಬೋಗರು ಹುಲಿಗೆ ತಮ್ಮ ಮುಖವನ್ನು ತೋರಿಸದೆ ಬೆನ್ನು ಮಾತ್ರ ತೋರಿಸುತ್ತಾ ನಿಂತ ಕಡೆಯಲ್ಲೇ ಹುಲಿಯ ವೇಗಕ್ಕೆ ಸರಿಯಾಗಿ ಚಾಚೂ ತಪ್ಪದಂತೆ ತಮ್ಮ ವೇಗವನ್ನು ಹೊಂದಿಸಿಕೊಂಡು ಕುಲಾಲಚಕ್ರದಂತೆ ತಿರುಗುತ್ತಿದ್ದರು. ಒಂದು ಕ್ಷಣವಾದರೂ ಹುಲಿಗೆ ಅವರ ಮುಖ ದರ್ಶನವಾಗಲಿಲ್ಲ. ಈ ದೊಂಬರಾಟದ ಕಾರಣದಿಂದಾಗಿ ಶಾನುಭೋಗರಿಗೆ ತಲೆ ಸುತ್ತಲಾರಂಭಿಸಿತು.


collegedunia
India's largest Student Review Platform

V. ಈ ಕೆಳಗಿನ ಪ್ರಶ್ನೆಗಳಿಗೆ ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ.

11.” ಮೊಟ್ಟಮೊದಲ ಬಾರಿಗೆ ಸ್ತ್ರೀಯರಿಗೆ ಮತದಾನದ ಹಕ್ಕು”

ಆಯ್ಕೆ: ಈ ಮೇಲಿನ ವಾಕ್ಯವನ್ನು “ಭಾಗ್ಯಶಿಲ್ಪಿಗಳು “ ಗದ್ಯಭಾಗದ ಪಠ್ಯಪುಸ್ತಕ ಸಮಿತಿ ರಚನೆಯ
’ನಾಲ್ವಡಿ ಕೃಷ್ಣರಾಜ ಒಡೆಯರ್ ’ ಎಂಬ ಭಾಗದಿಂದ ಆರಿಸಲಾಗಿದೆ.
ಸಂದರ್ಭ: ನಾಲ್ವಡಿ ಕೃಷ್ಣರಾಜ ಒಡೆಯರ್ ತಮ್ಮ ಆಳ್ವಿಕೆಯ ಕಾಲದಲ್ಲಿ ಹಲವಾರು ಸಾಮಾಜಿಕ ಕಾನೂನುಗಳನ್ನು ಜಾರಿಗೊಳಿಸಿದರು. ಜಾರಿಗೊಳಿಸಿದ ಕಾನೂನುಗಳಲ್ಲಿ ಮೊಟ್ಟಮೊದಲ ಬಾರಿಗೆ ಸ್ತ್ರೀಯರಿಗೆ ಮತದಾನದ ಹಕ್ಕು ಕೂಡ ಒಂದು.
ಸ್ವಾರಸ್ಯ: ನಾಲ್ವಡಿ ಕೃಷ್ಣರಾಜ ಒಡೆಯರ್ ತಮ್ಮ ಆಳ್ವಿಕೆಯಲ್ಲಿ ಮಹಿಳಾ ಪರವಾಗಿ ವಿಶೇಷ ಕಾನೂನುಗಳನ್ನು ಜಾರಿ ಮಾಡಿದ್ದರು ಎಂಬುದು ಸ್ವಾರಸ್ಯ.

ಅಥವಾ

ಹುಸಿಯದ ಬೇಹಾರಿಯೇ ಇಲ್ಲ

ಆಯ್ಕೆ : ಈ ವಾಕ್ಯವನ್ನು’ದುರ್ಗಸಿಂಹ’ನ ಪಂಚತಂತ್ರ ಎಂಬ ಕೃತಿಯಿಂದ ಆಯ್ದ ‘ವೃಕ್ಷಸಾಕ್ಷಿ’ ಎಂಬ ಪಾಠದಿಂದ ಆರಿಸಲಾಗಿದೆ.
ಸಂದರ್ಭ : ಈ ಮಾತನ್ನು ಧರ್ಮಬುದ್ಧಿಯು ಧರ್ಮಾಧಿಕರಣರಿಗೆ ಹೇಳಿದನು. ಧರ್ಮಬುದ್ಧಿಯೇ ಧನವೆಲ್ಲವನ್ನು ತೆಗೆದುಕೊಂಡನೆಂದು ಮರದ ಪೊಟರೆಯಲ್ಲಿ ಅಡಗಿದ್ದ ಪ್ರೇಮಮತಿಯು ಹೇಳಿದಾಗ ಧರ್ಮಬುದ್ಧಿಯು ಇದರಲ್ಲಿ ಏನೋ ಮೋಸವಿರಲೇಬೇಕೆಂಬ ಸಂಶಯದಿಂದ ಮರವನ್ನು ಒಂದು ಸುತ್ತು ಹಾಕುತ್ತಾನೆ. ಆ ದೊಡ್ಡದಾದ ಪೊಟರೆಯಲ್ಲಿ ಮನುಷ್ಯ ಸಂಚಾರವಿರುವುದನ್ನು ಕಂಡು ಆ ಕೂಡಲೇ ಮೇಲಿನ ಮಾತುಗಳನ್ನು ಹೇಳುತ್ತಾನೆ.
ಸ್ವಾರಸ್ಯ: ವ್ಯಾಪಾರಿಗಳು ತಮ್ಮ ವೃತ್ತಿಯಲ್ಲಿ ಲಾಭಕ್ಕಾಗಿ ಸುಳ್ಳು ಹೇಳುತ್ತಾರೆ . ವ್ಯಾಪಾರ ಧರ್ಮದಲ್ಲಿ ಸುಳ್ಳು ಹೇಳುವುದು ಸಹಜ ಎಂಬುದು ಈ ಮೇಲಿನ ವಾಕ್ಯದ ಸ್ವಾರಸ್ಯ.

12. “ಬೇರೆ ಬಣ್ಣವನೆ ಕಾಣೆ”

ಆಯ್ಕೆ: ಈ ವಾಕ್ಯವು ಕುವೆಂಪು ಅವರ ’ಪಕ್ಷಿಕಾಶಿ ’ಕವನ ಸಂಕಲನದಿಂದ ಆರಿಸಲಾದ ’ಹಸುರು’ ಎಂಬ ಪದ್ಯದಲ್ಲಿ ಬಂದಿದೆ.
ಸಂದರ್ಭ: ಆಶ್ವೀಜ ಮಾಸದಲ್ಲಿ ಕವಿಗೆ ಎಲ್ಲೆಲ್ಲೂ ಹಸುರು ಬಣ್ಣವೇ ಕಂಡಿದೆ. ಭೂಮಿಯನ್ನು ಆವರಿಸಿರುವ ನಯವಾದ ಹಸುರು ಹುಲ್ಲು, ಹಸುರು ಬಣ್ಣದ ಜಮಕಾನೆಯಿಂದ ಭೂಮಿಯನ್ನು ಮುಚ್ಚಿರುವಂತೆ ತೋರಿದೆ ಎನ್ನುವ ಸಂದರ್ಭದಲ್ಲಿ ಈ ಮಾತುಗಳು ಬಂದಿದೆ.
ಸ್ವಾರಸ್ಯ: ನವರಾತ್ರಿಯ ಕಾಲದಲ್ಲಿ ಪ್ರಕೃತಿಯಲ್ಲಿ ಹಸುರು ಬಣ್ಣವೊಂದೇ ಎಲ್ಲೆಂದರಲ್ಲಿ ವಿವಿಧ ರೂಪದಲ್ಲಿ ಹರಿದಾಡಿದೆ ಎಂಬುದು ಕವಿಯ ಕಲ್ಪನೆಯಾಗಿದೆ ಎಂಬುದು ಈ ವಾಕ್ಯದ ಸ್ವಾರಸ್ಯ.

ಅಥವಾ

“ಅರಸುಗಳ ವಾಜಿಯಂ ಬಿಡು.”

ಆಯ್ಕೆ: ಈ ವಾಕ್ಯವು ಲಕ್ಷ್ಮೀಶ ಕವಿ ವಿರಚಿತ ’ಜೈಮಿನಿಭಾರತದಿಂದ ಆಯ್ದ ’ವೀರಲವ’ಎಂಬ ಪದ್ಯ/ಕಾವ್ಯಭಾಗದಿಂದ ಆರಿಸಲಾಗಿದೆ.

*These answers are meant to be used by evaluators.

collegedunia
India's largest Student Review Platform

ಸಂದರ್ಭ: ಈ ಮಾತುಗಳನ್ನು ಮುನಿಕುಮಾರರು ಲವನಿಗೆ ಹೇಳುತ್ತಾರೆ.
ರಾಮನ ಅಶ್ವಮೇಧದ ಕುದುರೆಯು ವಾಲ್ಮೀಕಿ ಮುನಿಯ ಆಶ್ರಮವನ್ನು ಹೊಕ್ಕ ಸಂದರ್ಭದಲ್ಲಿ ಕುದುರೆಯ ಹಣೆಪಟ್ಟಿಯಲ್ಲಿದ್ದ ಲಿಖಿತವನ್ನು ನೋಡಿ ಉರಿದೆದ್ದ ಲವನು ರಾಮನ ಗರ್ವವನ್ನು ಮುರಿಯಬೇಕೆಂದು ಕುದುರೆಯನ್ನು ಬಾಳೆಯ ಗಿಡಕ್ಕೆ ತನ್ನ ಉತ್ತರೀಯದಿಂದ ಕಟ್ಟಿಹಾಕುತ್ತಾನೆ. ಅದನ್ನು ಕಂಡ ಮುನಿಕುಮಾರರು ಭಯದಿಂದ ಈ ಮಾತುಗಳನ್ನು ಹೇಳುತ್ತಾರೆ.
ಸ್ವಾರಸ್ಯ: ಅರಸುಗಳ ತಂಟೆಗೆ ಹೋಗಬಾರದು. ಅವರ ಕುದುರೆಯನ್ನು ಕಟ್ಟುವುದು ಅಪರಾಧ ಎನ್ನುವುದು ಈ ವಾಕ್ಯದಲ್ಲಿ ಸ್ವಾರಸ್ಯಪೂರ್ಣವಾಗಿದೆ.

VI. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.

13. ಜಲಿಯನ್ ವಾಲಾಬಾಗ್ ನಲ್ಲಿರುವ ಒಕ್ಕಣೆ ಏನು?

ಉತ್ತರ: ಎಪ್ರಿಲ್ ೧೩, ೧೯೧೯ ರಂದು ಬ್ರಿಟಿಷರ ಗುಂಡುಗಳಿಗೆ ಆಹುತಿಯಾದ ಸುಮಾರು ಎರಡು ಸಾವಿರ ಮುಗ್ಧ ಹಿಂದೂ, ಸಿಕ್ ಮತ್ತು ಮುಸಲ್ಮಾನರ ಸಮ್ಮಿಳಿತ ರಕ್ತದಿಂದ ಈ ಪ್ರದೇಶ ಪಾವನವಾಗಿದೆ". ಎಂಬುದು ಜಲಿಯನ್ ವಾಲಾಬಾಗ್ ನಲ್ಲಿರುವ ಒಕ್ಕಣೆ.

14. ಬಡತನ, ಸುಂದರಿ ಹಾಗೂ ಅವಳ ತಂದೆಗೆ ಕಷ್ಟವಾಗಲಿಲ್ಲ ಏಕೆ?

ಉತ್ತರ: ಬಡತನದಿಂದ ಸುಂದರಿಗೆ ಹಾಗೂ ಅವಳ ತಂದೆಗೆ ಅಷ್ಟೇನು ತೊಂದರೆ ಆಗಲಿಲ್ಲ . ಏಕೆಂದರೆ ಅವರ ಜೀವನ ಸರಳವಾಗಿತ್ತು.

VII. ಈ ಕೆಳಗಿನ ಪ್ರಶ್ನೆಗಳಿಗೆ ಸುಮಾರು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

15. ಪ್ರಕೃತಿಯ 'ಹಸುರು' ಜೀವ ಜಗತ್ತಿಗೆ ಎಷ್ಟು ಮುಖ್ಯ ಎಂಬುದನ್ನು ಕುರಿತು ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

ಉತ್ತರ: 'ಹಸಿರೇ ಇಳೆಯ ಉಸಿರು ' ಎಂಬ ಕವಿವಾಣಿಯಂತೆ ಹಸುರು ಜೀವಜಗತ್ತಿಗೆ ಬಹಳ ಮುಖ್ಯ.ಹಸಿರಿದ್ದರೇ ಉಸಿರು. ಮರಗಿಡಬಳ್ಳಿಗಳು ಹಸುರಾಗಿದ್ದರೆ ಅದು ಒಳ್ಳೆಯ ಮಳೆಯಾಗಿರುವ, ಅಂತರ್ಜಲವಿರುವ ಸೂಚನೆಯಾಗಿದೆ.ಮಳೆಯಿಂದ ಭೂಮಿ ತಂಪಾಗಿರುತ್ತದೆ. ಗಿಡಮರಬೇರುಗಳಿಗೆ ನೀರು ದೊರೆಯುತ್ತದೆ. ನೀರನ್ನುಂಡು ಅವು ಚೆನ್ನಾಗಿ ಚಿಗುರಿ ಹಸುರಾಗಿ ತೋರುತ್ತವೆ. ವಾತಾವರಣದಲ್ಲಿರುವ ಇಂಗಾಲಾಲ್ಮವನ್ನು ಹೀರಿ ಶುದ್ಧವಾದ ಆಮ್ಲಜನಕವನ್ನು ಬಿಡುಗಡೆಮಾಡುತ್ತವೆ. ಗಿಡ ಮರಗಳಿಗಲ್ಲದೆ ಪ್ರಾಣಿ, ಪಕ್ಷಿ, ಕ್ರಿಮಿಕೀಟಗಳು ಎಲ್ಲಬಗೆಯ ಜೀವಿಗಳ ಬದುಕಿಗೆ ಹಸುರು ಆಸರೆಯಾಗಿದೆ. ಜೀವಜಗತ್ತಿನ ಬಹು ಮುಖ್ಯ ಜೀವಿಯಾದ ಮಾನವರಿಗೂ ಪ್ರಕೃತಿಯು ಹಲವು ಬಗೆಯಲ್ಲಿ ನೆರವು ನೀಡುತ್ತಿದೆ. ಹಣ್ಣು-ತರಕಾರಿ, ಆಹಾರ ಎಲ್ಲವೂ ಹಸುರು ಜಗತ್ತಿನ ಕೊಡುಗೆಯಾಗಿದೆ.

(ಸೂಚನೆ: ಮಕ್ಕಳು ಹಸುರು ಜೀವಜಗತ್ತಿಗೆ ಎಷ್ಟುಮುಖ್ಯ ಎಂಬ ಅಂಶವನ್ನು/ ಅಭಿಪ್ರಾಯಗಳನ್ನು ಸೃಜನಾತ್ಮಕವಾಗಿ ವ್ಯಕ್ತಪಡಿಸಿರುವ ಅಂಶಗಳನ್ನು ಗಮನಿಸಿ ಅಂಕ ನೀಡಬಹುದು.)

ಅಥವಾ

ಶಿಕ್ಷಣಕ್ಷೇತ್ರಕ್ಕೆ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಕೊಡುಗೆಯನ್ನು ತಿಳಿಸಿ.


collegedunia.com India's largest Student Review Platform

ಉತ್ತರ:ವಿಶ್ವೇಶ್ವರಯ್ಯ ಅವರು ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರವೆಂದು ನಂಬಿದ್ದರು.

ಶಿಕ್ಷಣವು ಸಂಜೀವಿನಿ ಎಂಬುದನ್ನು ಅರಿತಿದ್ದ ಅವರು ಶಿಕ್ಷಣದ ವಿವಿಧ ಯೋಜನೆಗಳನ್ನು ರೂಪಿಸಿದರು.ಪ್ರೌಢ ಶಿಕ್ಷಣ ಶಾಲೆಗಳು ಮದ್ರಾಸ್ ವಿಶ್ವವಿದ್ಯಾನಿಲಯದ ನಿಯಂತ್ರಣಕ್ಕೆ ಒಳಪಟ್ಟಿದ್ದವು.

ಇದನ್ನು ಬದಲಿಸಿ ಸಂಸ್ಥಾನವೇ ಪ್ರತ್ಯೇಕವಾದ ಪ್ರೌಢ ಶಿಕ್ಷಣದ ಅಂತಿಮ ಪರೀಕ್ಷೆ ನಡೆಸುವ ಯೋಜನೆಯನ್ನು ಆರ್ಥಿಕ ಪರಿಷತ್ತಿನ ಮೂಲಕ ರೂಪುಗೊಳಿಸಿದರು.

ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಗೆ ತಂದರು.

"ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸೊತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂಬುದನ್ನು ಮನಗಂಡ ಇವರು ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡಿದರು.

ಇದಕ್ಕಾಗಿಯೇ ಬೆಂಗಳೂರಿನಲ್ಲಿ ಮೆಕಾನಿಕಲ್ ಎಂಜಿನಿಯರಿಂಗ್ ಶಾಲೆ, ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗಳನ್ನು ಪ್ರಾರಂಭಿಸಿದರು.

ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದ್ದು ಇವರ ಕಾಲದ ಮತ್ತೊಂದು ಮಹತ್ವದ ಸಾಧನೆ.

*These answers are meant to be used by evaluators.

collegedunia.com
India's largest Student Review Platform